ಶ್ರೀ ಟಿ ಎಂ. ಮಂ ಎನಾಥ್.—ಈ ಇಲಾಖೆಯು ಮಂತ್ರಿಗಳು ಕಚ್ಚಿಡ ಮತ್ತು ಬೇರೆ ಕೆಲಸ ಗಳನ್ನು ನಿಲ್ಲಿಸಿ ತೀವ್ರವಾಗಿ ನೀರಾವರಿ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ ಅವರ ಹೇಳಿಕೆ ಪ್ರಕಾರ ಕೆಲವೇ ವಾರದಲ್ಲಿ ಇದನ್ನು ಸ್ಕೂಟನಿ ಮಾಡಿ ಕೆಲಸ ಪ್ರಾರಂಭೋತ್ಸವ ಮಾಡುವುದಕ್ಕೆ ಅಶ್ವಾಸನ ಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನೀರಾವರಿಗೆ ಆದ್ಯತೆ ಕೊಡಬೇಕು ಎನ್ನುತಕ್ಕ ತತ್ವವನ್ನು ಸರ್ಕಾರ ಒಪ್ಪಿಕೊಂಡಿದೆ. ಆದನು ಮಾನ್ಯ ಮಂತ್ರಿಗಳು ಹೇಳಿದ್ದಾರೆ, ಆದರೆ ಈ ಎರಡು ಕೆರೆಗಳಿಗೆ ಸಂಬಂಧಪಟ್ಟ ಹಾಗೆ ಇದರ ಅಂದಾಜುಗಳನ್ನು ಪರಿಶೀಲನೆ ಮಾಡಿ ಅವು ಸಾಧ್ಯ ಇದೆ ಎಂದು ಕಂಡು ಬಂದರೆ ಆದಷ್ಟು ಬೇಗ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

MISUSE OF LOANS SANCTIONED BY THE YELBURGA TALUK PRIMARY LAND DEVELOPMENT BANK

121 SRI PRABHURAJ PATIL (Yelburga).—

Will the Minister for Co-operation be pleased to state :-

(*a*) whether it has come to the notice of the Government that there are instances of getting loans sanctioned many for particular purpose from the Yelburga Taluk Primary Land Development Bank and utilising them without fulfilling the said purpose.

(*b*) if so, the action taken by the Government in this behalf ?

SRI A. SHANKARA ALVA (Minister for Co-operation).—

(*a*) No.

(*b*) Does not arise.

ಶ್ರೀ ಪ್ರಭುರಾಜ್ ಪಾಟೀಲ್.—ನನ್ನ ಆ ಪ್ರಶ್ನೆಗೆ ಉತ್ತರ ಇಲ್ಲ ಎಂದು ಹೇಳಿದ್ದೀರಿ. ಈ ಬಗ್ಗೆ ನಿರ್ದಿಷ್ಟವಾಗಿ ಉದಾಹರಣೆಗಳನ್ನು ನಿಮ್ಮ ಗಮನಕ್ಕೆ ತಂದರೆ ತೀಕ್ಷ್ಣವಾಗಿ ವಿಚಾರಣೆ ನಡೆಸುತ್ತೀರಾ ?

ಶ್ರೀ ಎ. ಶಂಕರ್ ಆಳ್ವ.—ಸಾಲ ಕೊಡುವಾಗ ಬಾಂಡ್ ತೆಗೆದುಕೊಳ್ಳುತ್ತಾರೆ, ಯಾವ ಉದ್ದೇಶಕ್ಕೆ ಸಾಲ ಕೇಳಿದ್ದಾರೋ ಆದಕ್ಕೆ ಉಪಯೋಗಿಸಬೇಕು, ಆದಕ್ಕೆ ಉಪಯೋಗಿಸದಿದ್ದರೆ, ಆ ಹಣವನ್ನು ಕೂಡಲೇ ವಸೂಲು ಮಾಡುತ್ತೇವೆ. ಅಂಥ ನಿದರ್ಶನಗಳು ಇದ್ದರೆ ನನ ಗಮನಕ್ಕೆ ತನ್ನಿ ಸೂಕ್ತ ಕ್ರಮ ವನ್ನು ತೆಗೆದುಕೊಳ್ಳುತ್ತೇನೆ.

DELAY IN SANCTION OF POLITICAL PENSION

221. SRI T. TAREGOWDA (Kallambella).—

Will the Chief Minister be pleased to state.

(*a*) Whether the Government is aware that there is inordinate delay in sanctioning political pension.

(*b*) Whether the Government has any proposal of simplifying the procedure by avoiding unnecessary querries so that the pensions are sanctioned early.

(SRI T. TAREGOWDA)

(*c*) whether the Government is aware that some registers in Central Jail concerning transfers to Bhyramangal Prison and Thippagondanahalli Open Prison are either destroyed or are not available.

(*d*) whether the Government has any proposal to consider the case of underground politicians and those suffered less than three months imprisonment for granting of political pension ?

SRI D. DEVARAJ URS.— (Chief Minister)

(*a*) and (*b*) Government is aware that in certain cases, delays occur before pensions are sanctioned. If the forms are completed in all respects and the documents required are enclosed, delays can be largely avoided.

(*c*) Yes.

(*d*) There is no proposal to consider grant of pension to those who were underground workers. A proposal for grant of pension to those who suffered imprisonment for less than three months is under consideration.

ಶ್ರೀ ಟಿ. ತಾರೇಗೌಡ.—(ಇ)ಗೆ ಉತ್ತರವಾಗಿ ರಾಜಕೀಯ ವಿಶ್ರಾಂತಿ ವೇತನವನ್ನು ಕೊಡುತ್ತಿರುವುದರಲ್ಲಿ, ತಲೆ ಮರೆಸಿಕೊಂಡು ಸೇವೆ ಸಲ್ಲಿಸಿದ ಕಾರ್ಯಕರ್ತರಿಗೆ ವಿಶ್ರಾಂತಿ ವೇತನವನ್ನು ಮಂಜೂರ್ಮಾಡುವುದಕ್ಕೆ ಸಲಹೆ ಇರುವುದಿಲ್ಲ ಎಂದು ಹೇಳಿದ್ದೀರಿ. ಅಂಡರ್‌ಗ್ರೌಂಡ್‌ನಲ್ಲಿ ಅನೇಕ ತಿಂಗಳುಗಳ ಕಾಲ ಹೊರಗಡೆ ಇದ್ದು ಸೇವೆ ಸಲ್ಲಿಸಿರುವುದರಿಂದ ಅವರು ಕೂಡ ಈ ವಿಶ್ರಾಂತಿ ವೇತನವನ್ನು ಕೊಡುವುದನ್ನು ಪರಿಶೀಲನೆ ಮಾಡಲಾಗುವುದೇ, ಅಲ್ಲವೆ ೩ತಿಂಗಳು ಗಳಿಗಿಂತ ಕಡಿಮೆ ಶಿಕ್ಷೆ ಅನುಭವಿಸಿದವರಿಗೆ ವಿಶ್ರಾಂತಿ ವೇತನವನ್ನು ಕೊಡುವುದು ಪರಿಶೀಲನೆಯಲ್ಲಿ ಇದೆಯೇ ಒಂದು ತಿಂಗಳು ಕೂಡ ಇದ್ದವರಿಗೂ ಕೂಡ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಯೋಚನೆ ಹಿಂದೆ ೬ ತಿಂಗಳು ಇದ್ದುದನ್ನು ೩ತಿಂಗಳಿಗೆ ರೆಡ್ಯೂಸ್ ಮಾಡಿದ್ದು, ೩ತಿಂಗಳಿಂದ ಒಂದು ತಿಂಗಳು ಮಾಡಿದರೆ, ೧೫ದಿವಸ ಮಾಡಿ ಕೊನೆಗೆ ಏನೂ ಬೇಡ ಎಂದು ಹೇಳಬಹುದು ಆದುದರಿಂದ ೩ತಿಂಗಳುಗಳಿಗಿಂತ ಕಡಿಮೆ ಮಾಡುವುದಕ್ಕೆ ಆಗುವುದಿಲ್ಲ ಸ್ಪೆಷಲ್ ಕೇಸಸ್ ಯಾವುದಾದರೂ ಇದ್ದರೆ ರೂಲ್ಸ್ ತೆರವು ಮಾಡಿ ಕೊಡಬಹುದು ಎಂದು ನಾವು ಅಧಿಕಾರ ಇಟ್ಟು ಕೂಂಡಿದ್ದೇವೆ ಅದು ಬಹಳ 'ರೇರ್' ಆಗಿ ಮಾಡುತ್ತೇವೆ. ಇದಕ್ಕಿಂತ ರೂಲ್ಸ್ ಬಾರದೆ ರಿಲ್ಯಾಕ್ಸ್ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಟಿ. ತಾರೇಗೌಡ.—ಸೆಂಟ್ರಿಲ್ ಜೈಲಿನಲ್ಲಿ ರಿಕಾರ್ಡ್ ಇಲ್ಲದೆ, ಸುಟ್ಟು ಹೋಗಿರುವುದರಿಂದ ಬೈರಮಂಗಲದಲ್ಲಿ ಮತ್ತು ತಿಪ್ಪಗೊಂಡನ ಹಳ್ಳಿ ಬಂದಿಖಾನೆಗೆ ಹೋದವರಿಗೆ ರಿಕಾರ್ಡ್‌ಗಳಿಲ್ಲ ಸರ್ಟಿಫಿಕೇಟ್ ಇಲ್ಲದೇ ಇರುವುದರಿಂದ ವಿಶ್ರಾಂತಿ ವೇತನವನ್ನು ದೊರೆಯದಿರುವುದಕ್ಕೆ ಕಷ್ಟವಾಗಿದೆ. ಇನ್ನೂ ಯಾವುದಾದರೂ ರೀತಿಯಲ್ಲಿ ಅವರಿಗೆ ಪರಿಹಾರ ದೊರಕಿಸುವುದಕ್ಕೆ ಯೋಚನೆ ಮಾಡುತ್ತೀರಾ. ಎಂ ಎಲ್.ಎ. ಸರ್ಟಿಫಿಕೇಟ್ ಜೊತೆಯಲ್ಲಿ ಇದ್ದವರ ಸರ್ಟಿಫಿಕೇಟ್ ಇದ್ದರೆ ಅದನ್ನು ಕೂಡ ಪರಿಗಣಿಸುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಎಂ.ಎಲ್.ಎ.ಯವರೆಗೆ ಹೈಲಿಗೆ ಹೋಗಿದ್ದು ಗೊತ್ತಾಗುವುದಿಲ್ಲ ಅವರಿಗೆ ಸರ್ಟಿಫೈ ಮಾಡುವುದು ಕಠಿಣವಾಗುತ್ತದೆ. ಚಿಕ್ಕವರು ಎಂ;ಎಲ್.ಎ. ಇದ್ದಾರೆ ಅವರಂಗಳಿಗೆ ಜೈಲಿಗೆ ಹೋಗಿದ್ದರೋ ಇಲ್ಲವೋ ಗೊತ್ತಾಗುವುದು ಹೇಗೆ ನಿಮ್ಮಂಥವರು ಹಳಬರು ಚೆನ್ನಾಗಿ ಗೊತಿದ್ದು, ಅದೇ ಸ್ಥಳದವರು ಸರ್ಟಿಫೈ ಮಾಡಿ ಕೊಟ್ಟರೆ ಸರ್ಕಾರದವರು ಅದನ್ನು ಪರಿಶೀಲನೆ ಮಾಡಬಹುದು.

ಶ್ರೀ ಎಂ ಎಸ್, ಕೃಷ್ಣನ್.—ಕೇಂದ್ರದ ಒಂದು ಯೋಜನೆ ಪ್ರಕಾರ ಅಲ್ಲಿ ಒಂದು ವರ್ಷಕ್ಕೆ ೫ ಸಾವಿರ ರೂಪಾಯಿಗಳಿಗಿಂತ ಕಡಿಮೆ ವರಮಾನ ಇರುವವರಿಗೆ ಪೊಲಿಟಿಕಲ್ ಪೆನ್‌ಷನ್ ಕೊಡಬೇಕು ಎಂದು ಇದೆ. ಆದರೆ ಮೈಸೂರು ರಾಜ್ಯದಲ್ಲಿ ೨೪೦೦ರೂಪಾಯಿ ಎಂದು ಮಾಡಿದ್ದಾರೆ. ಇದರ ಬಗ್ಗೆ ಪುನರ್ ಪರಿಶೀಲನೆ ಮಾಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಅದನ್ನು ಹೆಚ್ಚಿಸಬೇಕು ಎಂದು ಹೇಳುತ್ತೀರಾ.

ಶ್ರೀ ಎಂ. ಎಸ್. ಕೃಷ್ಣನ್....ಹೌದು ಇನ್ನೂ ಸ್ವಲ್ಪ ಜನರಿಗೆ ಸಿಕ್ಕಲಿ ಎಂದು.

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಸದಸ್ಯರು ೨೪೦೦ರೂಪಾಯಿ ಎಂದು ಹೇಳಿದರು. ಅದಕ್ಕಿಂತ ಜಾಸ್ತಿ ಕೊಡುತ್ತಾ ಇದ್ದೇವೆ. ಅದರಿಂದ ಏನು ಕಷ್ಟ ಬಂದಿಲ್ಲ. ನಿಜವಾದ ಕಷ್ಟ ಏನೆಂದರೆ ಸರ್ಟಿಫಿಕೇಟ್ ಇಲ್ಲವೇ ಇರುವುದು.

ಶ್ರೀ ಹಂಜೆ ಶಿವಣ್ಣ.—ತಾವು ಉತ್ತರದಲ್ಲಿ ಹೇಳಿದ್ದೀರಿ. ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದರೆ, ಅರ್ಜಿ ನಮೂನೆಗಳನ್ನು ಸರಿಯಾಗಿ ಪೂರ್ತಿಗೊಳಿಸದೇ ಇರುವುದು ಕಾರಣ ಎಂದು ಹೇಳಿದ್ದೀರಿ. ಎಲ್ಲಾ ಅರ್ಜಿ ನಮೂನೆಗಳನ್ನೂ ಕ್ರಮವಾಗಿ ಪೂರ್ತಿ ಗೊಳಿಸಿದ್ದರೂ ಕೂಡ ಈ ವಿಷಯದಲ್ಲಿ ವಿಳಂಬವಾಗುತ್ತಾ ಇದೆ. ಇದಕ್ಕೆ ಕಾಲ ನಿಗದಿ ಮಾಡಿ, ಅರ್ಜಿಗಳನ್ನು ಆದಷ್ಟು ಜಾಗ್ರತೆ ವಿಲೇ ಮಾಡುವುದಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಈಗ ಸುಮಾರು ೬೭೭೦ ಜನರಿಗೆ ಕೊಟ್ಟಿದ್ದೇವೆ ಈಗ ನಮ್ಮ ಮುಂದೆ ೯೦೨ ಅರ್ಜಿಗಳಿವೆ. ಅರ್ಜಿಗಳನ್ನು ಸರಿಯಾಗಿ ಭರ್ತಿ ಮಾಡಿರುವುದಿಲ್ಲ, ಅವಕೆ ಬೇಕಾದ ಸರ್ಟಿಫಿಕೇಟ್ಸ್ ಇರುವುದಿಲ್ಲ. ಇಂತಹ ಕಾರಣಗಳಿಂದ ಅರ್ಜಿಗಳು ವಿಲೇ ಆಗುವುದಕ್ಕೆ ವಿಳಂಬವಾಗಿದೆ. ಎಲ್ಲಾ ಸರಿಯಾಗಿದ್ದರೆ ೮ ದಿವಸದಲ್ಲಿ ಎಲ್ಲರಿಗೂ ಕೊಟ್ಟು ಬಿಡುತ್ತೇವೆ.

ಶ್ರೀ ಎಚ್.ಎಸ್. ಸಿದ್ದಪ್ಪ.—೧೯೪೭ನೇ ಇಸವಿಯಲ್ಲಿ ಹುಟ್ಟಿದೇ ಇದ್ದವರು ಮತ್ತು ಜೈಲಿಗೆ ಹೋಗುವುದಕ್ಕೆ ಅವಕಾಶ ಇಲ್ಲದೇ ಇದ್ದ ಜನಕ್ಕೆ ಪೊಲಿಟಿಕಲ್ ಪೆನ್‌ಷನ್ ಕೊಟ್ಟಿರತಕ್ಕ ಸಂದರ್ಭಗಳು ತಮ್ಮ ಅವಗಾಹನೆಗೆ ಬಂದಿದೆಯೇ ? ಬಂದಿದ್ದರೆ ಅಂಥವರು ಯಾರ್ಯಾರು ಇದ್ದಾರೆಂದು ತನಿಖೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಇಚ್ಛೆಪಡುತ್ತದೆಯೇ ?

ಶ್ರೀ ಡಿ ದೇವರಾಜ್ ಅರಸ್,—ನನಗೆ ಜ್ಞಾಪಕ ಇರುವುದು, ಹಾಗೆ ೨-೩ ಕೇಸಸ್ ಬಂದಿತ್ತು. ಅದನ್ನು ಕ್ಯಾನ್ಸಲ್ ಮಾಡಿದೆವು. ೭೦೦೦ ಅರ್ಜಿಗಳಿಗೆ ೮೨೦ವರ್ಷಗಳಿಂದ ಕೊಟ್ಟಿರಬೇಕಾದರೆ, ಇಲ್ಲ ಎಂದು ಹೇಳಲಿಕ್ಕೆ ಬರುವುದಿಲ್ಲ ನಮ್ಮ ಗಮನಕ್ಕೆ ಬಂದಿರುವ ಕಡೆ ಕ್ರಮ ತೆಗೆದುಕೊಂಡಿದ್ದೇವೆ. ಯಾರೇ ಆಗಲಿ, ಮಾನ್ಯ ಸದಸ್ಯರಾಗಲೀ, ಹೊರಗಡೆ ಯಾರೇ ಆಗಲೀ, ಹೀಗೆ ಮೋಸದಿಂದ ಪಡೆದಿದ್ದಾರೆ ಎಂದು ತಿಳಿಸಿದರೆ ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಬೈರೇಗೌಡರಂಥವರು ವಿಳಂಬ ಹೇಗೆ ಆಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಅಂಥಾದ್ದು ಏನಾದರೂ ಗೊತ್ತಾದರೆ ತಕ್ಷಣ ಕ್ಯಾನ್ಸಲ್ ಮಾಡುತ್ತೇವೆ. ಈಗಾಗಲೇ ೨-೩ ಕೇಸಸ್‌ಗಳಲ್ಲಿ ಕ್ಯಾನ್ಸಲ್ ಮಾಡಿದ್ದೆವೆ.

ಶ್ರೀ ಜೆ. ವೆಂಕಟಪ್ಪ.—ವಿಶ್ರಾಂತಿ ವೇತನ ಪಡೆಯಲು ಮೂರು ತಿಂಗಳು ಜೈಲಿಗೆ ಹೋಗಿರ ಬೇಕು ವಿಂದು ಹೇಳಿದ್ದೀರಿ. ತಾಮ್ರಪತ್ರ ವಿತರಣೆ ಮಾಡುವ ಸಂದರ್ಭದಲ್ಲಿ ಒಂದು ತಿಂಗಳಾಗಿರಲಿ ಎರಡು ತಿಂಗಳಾಗಿರಲಿ, ೮ ದಿವಸವಾಗಿರಲಿ, ಹೋಗಿದ್ದರೆ ಅವರಿಗೆ ಗೌರವ ರೂಪದಲ್ಲಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಹಾಗೆ ಆಗುವುದಿಲ್ಲ. ತಾಮ್ರಪತ್ರ ಎಲ್ಲರಿಗೂ ಕೊಟ್ಟರೆ ಅದಕ್ಕೆ ಬೆಲೆ ಇಲ್ಲದ ಹಾಗೆ ಆಗುತ್ತದೆ.

ಶ್ರೀ ಸಿ. ಬೈರೇಗೌಡ.—ನ್ಯಾಯವಾಗಿ, ನಿಜವಾಗಿ ಜೈಲಿಗೆ ಹೋದಂಥವರಿಗೆ ಸರ್ಟಿಫಿಕೇಟ್ ಕೊಡಿ ಅಂಥ ಕೇಸಸ್‌ಗೆ ಶಿಫಾರಸ್ಸು ಮಾಡುತ್ತೇವೆ. ಜೈಲಿಗೆ ಹೋಗದೇ ಇದ್ದಂಥವರಿಗೆ ನಾವು ಯಾರೂ ಶಿಫಾರಸು ಮಾಡುವುದಿಲ್ಲ ಎಂದು ಸಿದ್ದಪ್ಪನವರು ತಿಳಿದುಕೊಳ್ಳಬೇಕು.

ಶ್ರೀ ಡಿ. ದೇವರಾಜ್ ಅರಸ್.—ನೀವು ಮಾಡಿದಿರಿ ಎಂದು ಅಲ್ಲ. ಅನೇಕ ಕಡೆ ಹಾಗೆ ಆಗಿವೆ.